ಉಳಿದ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಹೇಳಬೇಕು. ಅದನ್ನು ಹೇಳುವುದಿಲ್ಲ. ಬರೀ ನೋಡುತ್ತೇನೆ, ಮಾಡುತ್ತೇನೆ ಎಂದು ಹೇಳಿದರೆ ಕೆಲಸಗಳಾಗುತ್ತವೆಯೇ? ಶಾಲಾ ರಿಪೇರಿಗೆ ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದಿರಿ, ಅದು ಏನಾಯಿತು? ನೀವು ಸ್ಟೇಟ್‌ಮೆಂಟ್ ಮಾಡುವಾಗ ಇದನ್ನೆಲ್ಲಾ ಯೋಚನೆ ಮಾಡುವುದಿಲ್ಲವೇ? ಒಂದು ಕೋಟಿ ರೂಪಾಯಿ ಶಾಲಾ ರಿಪೇರಿಗಾಗಿ ಬೆಳಗಾಂ ಜಿಲ್ಲೆಗೆ ಕೊಡುತ್ತೇವೆಂದು ಹೇಳಿದಿರಿ. ಇವತ್ತು ಈ ರೀತಿ ಹೇಳಿದರೆ ಹೇಗೆ? ಕೇಂದ್ರ ಸರ್ಕಾರದವರು ಕೊಡದೇ ಇದ್ದರೆ, ರಾಜ್ಯ ಸರ್ಕಾರದಿಂದ ನಾವು ಕೊಡುತ್ತೇವೆ ಎಂದು ಹೇಳಬೇಕು. ಇವತ್ತು ಏನು ಎಕ್ಷನ್‌ಪ್ಲಾನ್ ಅಪ್ರೂವಲ್ ಮಾಡಿದ್ದಾರೆ, ಅದಕ್ಕೆ ನಾವು ಕೊಡುತ್ತೇವೆ ಎಂದು ಧೈರ್ಯವಾಗಿ ಹೇಳಬೇಕು. ಆಗ ಮಂತ್ರಿಗಳು ಹೇಳಿದಹಾಗೆ ನಡೆದುಕೊಳ್ಳುತ್ತಾರೆ ಎಂಬ ಧೈರ್ಯ ಬರುತ್ತದೆ.

1.55 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನೀವು ಕಂಡು ಹಿಡಿಯಬೇಕು ಏಕೆಂದರೆ ನೀವು ಅದೇ ಜಿಲ್ಲೆಯವರು. ದಯಮಾಡಿ ಏನಾದರೂ ಒಂದು ಸೂತ್ರ ಕಂಡು ಹಿಡಿಯಿರಿ.

ಶ್ರೀ ಎಂ.ವೈ., ಘೋರ್ಪಡೆ : ಕೇಂದ್ರ ಸರ್ಕಾರದಿಂದ ಎಷ್ಟು ಹಣ ತರುವುದಕ್ಕೆ ಸಾಧ್ಯವಿದೆ ಅದನ್ನು ನಾವು ಮಾಡಬೇಕಾಗಿದೆ. ಅದರ ಜೊತೆಗೆ ನಾವು ಕೊಡಬೇಕು ಅಂತ ನಾನು ಒಂದೇ ಮಾತಿನಲ್ಲಿ ಹೇಳಿದೆ. ಈಸ್ಕೂಲ್ ಕಟ್ಟಡದ ಕಾರ್ಯಕ್ರಮ ರಿಪೇರಿ ಕಾರ್ಯಕ್ರಮವನ್ನೂ ನಾನೇ ಸ್ವತಃ ಹೋಗಿ ನೋಡಿದ್ದೇನೆ ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ನಾನೇ ಸ್ವತಃ ಈ ಜಿಲ್ಲೆಗಳಿಗೆ ಹೋಗಿ ನೋಡಿ ಈ ಕಾರ್ಯಕ್ರಮವನ್ನು ಬಹಳ ವ್ಯಾಪಕವಾಗಿ ಮಾಡಿದ್ದೇವೆ. ಅದಕ್ಕೆ ಯಾವ ಯಾವ ಬಜೆಟ್ ಹೆಡ್ನಲ್ಲಿ ಎಷ್ಟೆಷ್ಟು ಹಣ ಬರಬೇಕು ಅದರ ಜೊತೆಗೆ ಕಡಿಮೆ ಬಿದ್ದದ್ದನ್ನು ಜೆ.ಆರ್.ವೈ. ಹಣವನ್ನು ಕೂಡ ಉಪಯೋಗಿಸಿ ಅಂತ ಕೂಡ ನಾವು ಹೇಳಿದ್ದೇವೆ. ಆದಕಾರಣ ಆ ಕಾರ್ಯಕ್ರಮಕ್ಕೆ ಧಕ್ಕೆ ಬರುವುದಕ್ಕೆ ನಾವು ಬಿಡುವುದಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಗ್ರಾಮಪಂಚಾಯತ್ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆ

30-ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಗ್ರಾ. ಅ. ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ "ಮೀಸಲಾತಿ" ಅಳವಡಿಕೆಗೆ ಉಪಯೋಗಿಸಿರುವ ಮಾನದಂಡಗಳೇನು?

ಆ) ಮೇಲ್ಕಂಡ "ರೋಸ್ಟರ್ ಪದ್ಧತಿ" ಕುರಿತು ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕ ವಿರೋಧವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಮೀಸಲಾತಿಗಳನ್ನು ರದ್ದುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಅ) ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಪ್ರಕರಣ 44(2) ರಲ್ಲಿ ರಾಜ್ಯದಲ್ಲಿ ಅನುಸೂಚಿತ ಜಾತಿ:ಅನುಸೂಚಿತ ಪಂಗಡಗಳಿಗೆ ಅವುಗಳ ಜನಸಂಖ್ಯೆಯ ಪ್ರಮಾಣಕ್ಕನುಸಾರವಾಗಿ ಮತ್ತು ಹಿಂ. ವರ್ಗಗಳಿಗೆ $\frac{1}{3}$ ಭಾಗದಷ್ಟು ಹಾಗೆಯೇ ಪ್ರತಿ ವರ್ಗಗಳಲ್ಲಿ $\frac{1}{3}$ ಭಾಗಕ್ಕಿಂತ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಮೀಸಲಿರಿಸಿದೆ.

ಆ) ಇಲ್ಲ

ಇ) ದಿನಾಂಕ : 21-12-1993ರ ಸರ್ಕಾರಿ ಆದೇಶವನ್ನು ಮಾರ್ಪಾಟುಗೊಳಿಸಿ ದಿನಾಂಕ : 2-2-1994 ರಂದು ಆದೇಶ ಹೊರಡಿಸಲಾಗಿದೆ.

ಪಂಚಾಯಿತಿ ಚುನಾವಣೆಗಳಲ್ಲಿ ಪ.ಜಾ/ ಪ.ವರ್ಗದ ಮೀಸಲಾತಿ.

97-ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಗ್ರಾ. ಅ. ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಂಚಾಯತ್ ಚುನಾವಣೆಗಳಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಇಲ್ಲದಿದ್ದರೂ ಸಹಾ ಅಂತಹ ಪಂಚಾಯಿತಿಗಳಲ್ಲಿ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಇಡಲಾಗಿದೆಯೇ?

ಆ) ಹಾಗಿದ್ದಲ್ಲಿ ಅಂತಹ ಪಂಚಾಯಿತಿಗಳೆಷ್ಟು? ಹಾಗೂ ಜನಸಂಖ್ಯೆ ಇಲ್ಲದಿದ್ದರೂ ಮೀಸಲಾತಿ ನಿಗದಿ ಪಡಿಸಲು ಕಾರಣಗಳೇನು. (ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು)

ಇ) ಅಂತಹ ಪಂಚಾಯಿತಿಗಳಲ್ಲಿ ಜನಸಂಖ್ಯೆ ಇಲ್ಲದ ಪ್ರಯುಕ್ತ ಯಾರೂ ಉಮೇದುವಾರಿಕೆ ಹಾಕದೆ ಖಾಲಿ ಬಿದ್ದಿರುವ ಸ್ಥಾನಗಳೆಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ರಾಜ್ಯದಲ್ಲಿನ ಗ್ರಾಮ ಪಂಚಾಯಿತಿ ಪಂಚಾಯಿತಿ ಚುನಾವಣೆಗಳಲ್ಲಿ 1993ರ ರಾಜ್ಯ ಕಾಯಿದೆಯನ್ವಯ ಪರಿಶಿಷ್ ಪಂಗಡದ ಜನರಿಗೆ ಮೀಸಲಾತಿಯನ್ನು ಸದರಿ ಪಂಗಡದ ಜನಸಂಖ್ಯೆಗನುಗುಣವಾಗಿ, ಹಾಗೂ ಶೇ. 3 ಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಪ್ರತಿ ಗ್ರಾಮಮ ಪಂಚಾಯತ್ಗಳಲ್ಲಿ ಮೀಸಲಾಗಿಡಲಾಗಿದೆ.

ಆ) ದಿನಾಂಕ : 20-2-94 ರಂದು ಚುನಾವಣೆ ನಡೆದ ನಂತರ ಮಾಹಿತಿ ಲಭ್ಯವಾಗುವುದು.

ಇ) -ಅದೇ-

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ 94ರ ಲಿಖಿತ ಮೂಲಕ ಉತ್ತರಿಸುವ 3ನೇ ಪಟ್ಟಿಯಲ್ಲಿರುವ 11 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 99 98 120 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 8 ಚುಕ್ಕೆಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಮುಳಬಾಗಿಲು ಟೌನ್‌ನಲ್ಲಿ ಸ್ಟೇಡಿಯಂ ನಿರ್ಮಾಣ

101-ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ಟೌನ್ನಲ್ಲಿ ಸ್ಟೇಡಿಯಂ ಒಂದನ್ನು ಕಟ್ಟಲು ಜಿಲ್ಲಾ ಪರಿಷತ್ತಿನವರು ಮಂಜೂರು ಮಾಡಿರುವ ಹಣ ಎಷ್ಟು?